922120/2020/BU

## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ | : | 1104 |
| 2 | ಸದಸ್ಯರ ಹೆಸರು | : | ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 29-09-2020 |
| 4 | ಉತ್ತರಿಸುವವರು | : | ನಗರಾಭಿವೃದ್ಧಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ನಗರದಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಿರುವ (ಮಂಡ್ಯದ ಕೆರೆ ಅಂಗಳದ) ವಿವೇಕಾನಂದ ನಗರ ಬಡಾವಣೆಯನ್ನು ಯಾವಾಗ ಅಭಿವೃದ್ಧಿ ಪಡಿಸಲಾಗಿದೆ; | ಮಂಡ್ಯ ನಗರದಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಿರುವ ವಿವೇಕಾನಂದನಗರ ಬಡಾವಣೆಯನ್ನು 1998-99ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗಿದೆ. |
| ಆ) | ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; (ವಿವರವಾದ ಮಾಹಿತಿ ನೀಡುವುದು) | 20*30=442<br>30*40=1264<br>40*60=457<br>50*80=107<br>ಮೂಲೆ ನಿವೇಶನ=93<br>ವಾಣಿಜ್ಯ ನಿವೇಶನ=28<br>ಸಿ.ಎ. ನಿವೇಶನ=46<br>**ಒಟ್ಟು = 2437** |
| ಇ) | ಈ ನಿವೇಶನಗಳಿಗೆ ಸರಿಯಾದ ಮೂಲಭೂತ ಸೌಲಭ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣವೇನು; | ಗಮನಕ್ಕೆ ಬಂದಿದೆ. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ವಿವೇಕಾನಂದ ನಗರ ಬಡಾವಣೆಗೆ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯ ಅಂದಾಜು ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ ಪ್ರಾಧಿಕಾರವು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ನಅಇ 370 ಮೈಅಪ್ರಾ 2016, ದಿನಾಂಕ 23.09.2020 ರಲ್ಲಿ ಸದರಿ ಬಡಾವಣೆಗೆ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳ ರೂ.16.46 ಕೋಟಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |
| ಈ) | ಈ ಬಡಾವಣೆಯ ಬಗ್ಗೆ ಸಿ.ಬಿ.ಐ.ತನಿಖೆ ನಡೆದಿದ್ದು ಸದರಿ ತನಿಖಾ ವರದಿ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು: (ವಿವರ ನೀಡುವುದು) | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿಪಡಿಸಿರುವ ವಿವೇಕಾನಂದ ನಗರ ಬಡಾವಣೆಯಲ್ಲಿ, ಬಿಡಿ ನಿವೇಶನಗಳನ್ನು ನಿಯಮಬಾಹಿರವಾಗಿ ಹಂಚಿಕೆ ಮಾಡಿರುವ ಬಗ್ಗೆ ಸಿ.ಬಿ.ಐ ಸಂಸ್ಥೆಯು, ಪ್ರಕರಣ ಸಂಖ್ಯೆ:ಆರ್.ಸಿ.21(ಎ)/2014-ಬಿ.ಎಲ್.ಆರ್ ರಲ್ಲಿ ದಿನಾಂಕ 29.12.2015 ರಂದು ಸಲ್ಲಿಸಿರುವ ವರದಿಯಲ್ಲಿನ 24 ಅಧಿಕಾರಿ / ನೌಕರರು ಹಾಗೂ ಜನಪ್ರತಿನಿಧಿಗಳ ವಿರುದ್ಧ ಅಭಿಯೋಜನಾ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತದೆ. ಅದರಂತೆ, ಸಂಬಂಧಪಟ್ಟವರ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡುವ ಬಗ್ಗೆ ಈ |

| | | |
|---|---|---|
| | | ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ.<br><br>1. ಸರ್ಕಾರದ ಪತ್ರ ಸಂಖ್ಯೆ: ನಅಇ 635 ಮೈಅಪ್ರಾ 2015(ಭಾ-1), ದಿನಾಂಕ 01.09.2016 ರಲ್ಲಿ, 9 ಜನ ಖಾಸಗಿ ವ್ಯಕ್ತಿಗಳಾದ ಶ್ರೀಮತಿ ಪ್ರೇಮ, ಶ್ರೀ ಮಹೇಶ್, ಶ್ರೀ ಕೆ.ಹೆಚ್.ನಾಗರಾಜ್, ಶ್ರೀಮತಿ ಸುಶೀಲ, ಶ್ರೀ ಎನ್.ರಾಜೇಶ್, ಶ್ರೀ ಎನ್.ನಂದೀಶ್, ಶ್ರೀ ಹೆಚ್.ಡಿ.ರಾಜು, ಶ್ರೀಮತಿ ಪದ್ಮಿನಿ ಮತ್ತು ಶ್ರೀ ಪಿ.ಎಲ್.ಶಿವಕುಮಾರ್ ಇವರುಗಳ ವಿರುದ್ಧ ಅಭಿಯೋಜಿಸಲು ಸಿ.ಬಿ.ಐ ಸಂಸ್ಥೆಯನ್ನು ಕೋರಲಾಗಿರುತ್ತದೆ.<br><br>2. ಸರ್ಕಾರದ ಪತ್ರ ಸಂಖ್ಯೆ: ನಅಇ 635 ಮೈಅಪ್ರಾ 2015, ದಿನಾಂಕ 07.11.2016 ರಲ್ಲಿ, 03 ಜನ ಖಾಸಗಿ ವ್ಯಕ್ತಿಗಳಾದ ಶ್ರೀ ಎ.ಎಸ್.ಮಂಜುನಾಥ್, ಶ್ರೀ ನಾಗೇಶ್ ಮತ್ತು ಶ್ರೀ ಪಿ.ನಿಂಗರಾಜು ಇವರುಗಳ ವಿರುದ್ಧ ಅಭಿಯೋಜಿಸಲು ಸಿ.ಬಿ.ಐ ಸಂಸ್ಥೆಯನ್ನು ಕೋರಲಾಗಿರುತ್ತದೆ.<br><br>3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 20 ಕೆಇವಿ 2016(ಭಾ), ದಿನಾಂಕ 07.11.2016 ರಲ್ಲಿ ಶ್ರೀ ಡಿ.ಉಪೇಂದ್ರ ನಾಯಕ್, ಕೆ.ಎ.ಎಸ್(ಕಿರಿಯ ಶ್ರೇಣಿ), ಅಂದಿನ ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಇವರ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲಾಗಿದೆ.<br><br>4. ಸರ್ಕಾರದ ಆದೇಶ ಸಂಖ್ಯೆ: ಲೋಇ 196 ಎಸ್‌ಡಿಎ 2016, ದಿನಾಂಕ 09.12.2016 ರಲ್ಲಿ, ಶ್ರೀ ಕೆ.ಎಂ.ನಾಗರಾಜ್, ಅಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಶ್ರೀ ಕಾಳೇಗೌಡ, ಅಂದಿನ ಸಹಾಯಕ ಅಭಿಯಂತರರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಇವರುಗಳ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲಾಗಿದೆ.<br><br>5. ಸರ್ಕಾರದ ಆದೇಶ ಸಂಖ್ಯೆ: ನಅಇ 137 ನಯೋಸೇ 2016, ದಿನಾಂಕ 09.01.2017 ರಲ್ಲಿ ಶ್ರೀ ಮುರಳೀಧರ್, ಅಂದಿನ ನಗರ ಯೋಜಕರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಇವರ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲಾಗಿದೆ.<br><br>6. ಸರ್ಕಾರದ ಆದೇಶ ಸಂಖ್ಯೆ: ನಅಇ 635 ಮೈಅಪ್ರಾ 2015, ದಿನಾಂಕ 24.03.2017 ರಲ್ಲಿ, ಶ್ರೀಮತಿ ವಿದ್ಯಾನಾಗೇಂದ್ರ, ಅಂದಿನ ಅಧ್ಯಕ್ಷರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಶ್ರೀ |

| | | |
|---|---|---|
| | | ಎಂ.ಜೆ.ಚಿಕ್ಕಣ್ಣ, ಅಂದಿನ ಸದಸ್ಯರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಇವರುಗಳ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲಾಗಿದೆ.<br><br>7. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರ ಆದೇಶ ಸಂಖ್ಯೆ:ಡಿಟಿಸಿಪಿ/ಸಿ(4)/304/ ಪಿಎಫ್/2017, ದಿನಾಂಕ 24.01.2017 ಮತ್ತು 25.02.2017 ರಲ್ಲಿ ಶ್ರೀ ಎ.ಜಿ.ಮಹಾಲಿಂಗೇಗೌಡ, ಅಂದಿನ ಬೆರಳಚ್ಚುಗಾರರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಇವರ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲಾಗಿದೆ.<br><br>8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ ಇವರ ಆದೇಶ ಸಂಖ್ಯೆ:ಉಕಾ-1/ಸಿ2/ಪಿಡಿಒ/ಸಿಆರ್-82/2016-17, ದಿನಾಂಕ 13.02.2017 ರಲ್ಲಿ ಶ್ರೀ ವೆಂಕಟಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಲಕೆರೆ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲಾಗಿದೆ.<br><br>9. ಸರ್ಕಾರದ ಪತ್ರ ಸಂಖ್ಯೆ: ನಅಇ 635 ಮೈಅಪ್ರಾ2015(ಭಾ-1), ದಿನಾಂಕ 16.02.2017 ರಲ್ಲಿ, ಶ್ರೀ ಶ್ರೀನಿವಾಸ, ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಮತ್ತು ಶ್ರೀ ಸಿ.ಎಸ್.ಪುಟ್ಟರಾಜು, ಮಾನ್ಯ ಶಾಸಕರುಗಳು ಇವರುಗಳ ವಿರುದ್ಧ ಅಭಿಯೋಜನಾ ಮಂಜೂರಾತಿ ಪಡೆದುಕೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸಿ.ಬಿ.ಐ ಸಂಸ್ಥೆಗೆ ತಿಳಿಸಲಾಗಿರುತ್ತದೆ.<br><br>10. ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಇವರ ದಿನಾಂಕ 31.05.2017ರ ಆದೇಶದಲ್ಲಿ ಶ್ರೀ ಎಸ್.ಸತೀಶ, 'ಡಿ' ಗ್ರೂಪ್ ನೌಕರರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಇವರ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲಾಗಿದೆ.<br><br>ಸಿ.ಬಿ.ಐ ಸಂಸ್ಥೆಯು ದಿನಾಂಕ 29.12.2015 ರಂದು ಸಲ್ಲಿಸಿರುವ ಪತ್ರದಲ್ಲಿ, ಆಪಾದಿತರಾದ ಶ್ರೀ ಕೆ.ಎಂ.ನಾಗರಾಜು, ಶ್ರೀ ಮುರಳಿಧರ್, ಶ್ರೀ ಎಸ್.ಸತೀಶ್, ಶ್ರೀ ವೆಂಕಟಯ್ಯ, ಶ್ರೀ ಕಾಳೇಗೌಡ ಮತ್ತು ಶ್ರೀ ಎ.ಜಿ.ಮಹಾಲಿಂಗೇಗೌಡ ಇವರುಗಳ ವಿರುದ್ಧ ದಂಡನೆ ವಿಧಿಸಲು ವಿಚಾರಣೆ ನಡೆಸುವ ಕುರಿತು ಕ್ರಮವಹಿಸುವಂತೆ ಸೂಚಿಸಿರುತ್ತದೆ. ಅದರಂತೆ, ಆರೋಪಿತರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು |

| | | |
|---|---|---|
| | | ಸರ್ಕಾರದ ಆದೇಶ ಸಂಖ್ಯೆ: ನಅಇ 462 ಮೈಅಪ್ರಾ 2016, ದಿನಾಂಕ 09.08.2018 ರಲ್ಲಿ, ಶ್ರೀ ಹೆಚ್.ಎಂ.ಶಿವಕುಮಾರಸ್ವಾಮಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಆದರೆ, ಶ್ರೀ ಹೆಚ್.ಎಂ.ಶಿವಕುಮಾರಸ್ವಾಮಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ಮೈಸೂರು ಜಿಲ್ಲಾ ಗ್ರಾಹಕರ ವೇದಿಕೆಯ ಅಧ್ಯಕ್ಷರನ್ನಾಗಿ ಮರು ನೇಮಕ ಮಾಡಿದ್ದರಿಂದ, ಈ ಪ್ರಕರಣದ ವಿಚಾರಣೆಯನ್ನು ನಡೆಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದ್ದರಿಂದ, ಸರ್ಕಾರದ ಆದೇಶ ಸಂಖ್ಯೆ: ನಅಇ 462 ಮೈಅಪ್ರಾ 2016, ದಿನಾಂಕ 03.11.2018 ರಲ್ಲಿ ಶ್ರೀ ಬಸವನಹಳ್ಳಿ ವೆಂಕಟಕೃಷ್ಣಯ್ಯ ಪ್ರಕಾಶ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಸರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಆದರೆ, ಸದರಿಯವರು ನಿಗದಿತ ಅವಧಿಯಲ್ಲಿ ವಿಚಾರಣೆಯನ್ನು ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸದ ಕಾರಣ, ಸರ್ಕಾರದ ಆದೇಶ ಸಂಖ್ಯೆ: ನಅಇ 462 ಮೈಅಪ್ರಾ 2016, ದಿನಾಂಕ 06.07.2020ರಲ್ಲಿ ಇವರ ಬದಲಾಗಿ ಶ್ರೀಮತಿ ಕಮಲ, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.<br><br>ಶಾಖಾ ಮುಖ್ಯಸ್ಥರು, ಎ.ಸಿ.ಬಿ, ಸಿ.ಬಿ.ಐ ಸಂಸ್ಥೆರವರು ದಿನಾಂಕ 09.09.2020 ರಂದು ಸಲ್ಲಿಸಿರುವ ಪತ್ರದಲ್ಲಿ, ಪ್ರಕರಣ ಸಂಖ್ಯೆ:ಆರ್.ಸಿ.21(ಎ)/2014-ಬಿ.ಎಲ್.ಆರ್ ರಲ್ಲಿ ದಿನಾಂಕ 31.12.2015 ರಂದು ಮಾನ್ಯ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್‌ನ್ನು ಸಲ್ಲಿಸಿದ್ದು, ಇದರ ವಿರುದ್ಧ ಶ್ರೀಮತಿ ವಿದ್ಯಾನಾಗೇಂದ್ರ, ಅಂದಿನ ಅಧ್ಯಕ್ಷರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಎಫ್.ಐ.ಆರ್ ಮತ್ತು ಚಾರ್ಜ್‌ಶೀಟ್ ನ್ನು ರದ್ದುಗೊಳಿಸಲು ಕ್ರಿಮಿನಲ್ ಅರ್ಜಿ ಸಂಖ್ಯೆ:3578/2017ನ್ನು ದಾಖಲಿಸಿದ್ದು, ಈ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದಾಗಿ ಮಾಹಿತಿಯನ್ನು ಸಲ್ಲಿಸಿರುತ್ತಾರೆ.<br><br>ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿರುವ ವಿವೇಕಾನಂದ ನಗರ ಬಡಾವಣೆಯಲ್ಲಿ 107 ಬಿಡಿ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವವರ ವಿರುದ್ಧ ತನಿಖೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಒಇ 278 ಸಿ.ಐ.ಡಿ 2014, ದಿನಾಂಕ 22.01.2016 ರಲ್ಲಿ ಸಿ.ಬಿ.ಐ ಸಂಸ್ಥೆಗೆ ವಹಿಸಲಾಗಿರುತ್ತದೆ. ಈ ಬಗ್ಗೆ ಸಿ.ಬಿ.ಐ ಸಂಸ್ಥೆಯು ದಾಖಲಿಸಿರುವ ಪ್ರಕರಣ |

| | | |
|---|---|---|
| | | ಸಂಖ್ಯೆ: ಆರ್.ಸಿ.02(ಎ)/ 2017- ಬಿಎಲ್ಆರ್ ರ ವರದಿಯು ಇನ್ನೂ ಸ್ವೀಕೃತವಾಗಿರುವುದಿಲ್ಲ. |
| ಉ) | ಸದರಿ ಬಡಾವಣೆಯ ಸಮಸ್ಯೆಗಳನ್ನು ಬಗೆಹರಿಸಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ನಅಇ 370 ಮೈಅಪ್ರಾ 2016, ದಿನಾಂಕ 23.09.2020 ರಲ್ಲಿ ಸದರಿ ಬಡಾವಣೆಗೆ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳ ರೂ.16.46 ಕೋಟಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |

**ಸಂಖ್ಯೆ: ನಅಇ 233 ಮೈಅಪ್ರಾ 2020 (ಇ)**

**(ಬಿ.ಎ. ಬಸವರಾಜ)**
ನಗರಾಭಿವೃದ್ಧಿ ಸಚಿವರು
(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು